# ವಿಂಡೀಸ್: ಹೀಗೇಕೆ ಉಡೀಸ್?





**ಪ್ರಸ್ತುತ ಭಾರತ ಪ್ರವಾಸದಲ್ಲಿರುವ ವೆಸ್ಟ್ ಇಂಡೀಸ್ ಎರಡು ಟೆಸ್ಟ್‌ಗಳಲ್ಲೂ ನುಣ್ಣಗೆ ಸೋಲನುಭವಿಸಿದೆ. ಒಂದೊಮ್ಮೆ ಕ್ರಿಕೆಟ್ ಜಗತ್ತಿನ ದೈತ್ಯರಂತಿದ್ದವರು, ಈಗ ಕ್ರಿಕೆಟ್ ಶಿಶುಗಳಂತೆ ಕಾಣಿಸುತ್ತಿದ್ದಾರೆ.**

**■ ವಿಶಾಖ ಎನ್.**

ವೆಸ್ಟ್ ಇಂಡೀಸ್ ಕ್ರಿಕೆಟ್– ಹೀಗೆಂದೊಡನೆ ಮಗುವಿನಂಥ ಮುಖದ ಬ್ರಯಾನ್ ಲಾರಾ ಹಾಗೂ ಅವರ ಪಾದಚಲನೆಯ ‘ಸರಕ್’ ಎಂಬ ಸದ್ದು ವಿಕೆಟ್‌ಗೆ ಅಂಟಿಕೊಂಡ ಮೈಕ್ರೋಫೋನ್‌ನಿಂದ ಹೊಮ್ಮಿದ್ದು ನೆನಪಾಗುತ್ತದೆ. ಕಂದು ಮುಖದ ಮೇಲೆ ಢಾಳಾಗಿಯೇನೂ ಕಾಣದ ಬೆವರ ಹನಿಗಳ ನಡುವೆ ಲಾರಾ ಅಷ್ಟೂ ಹಲ್ಲುಗಳನ್ನು ತೋರಿಸುತ್ತಾ ಮುಂದಿನ ಎಸೆತವನ್ನು ಎಲ್ಲಿಗೆ ಕಳುಹಿಸಬೇಕು ಎಂಬ ಲೆಕ್ಕಾಚಾರ ಹಾಕುತ್ತಿದ್ದ ಚಿತ್ರಣವಿನ್ನೂ ತಾಜಾ ಎನ್ನುವಂತೆ ಅಚ್ಚೊತ್ತಿದೆ. ಚ್ಯುಯಿಂಗ್ ಗಮ್ ಅಗೆಯುತ್ತಾ ಧಾಷ್ಟ್ಯದಿಂದ ನಿಲ್ಲುತ್ತಿದ್ದ ವಿವಿಯನ್ ರಿಚರ್ಡ್ಸ್ ಎದುರಾಳಿ ಬೌಲರ್‌ಗಳನ್ನೇ ಜಗೆಯುತ್ತಿದ್ದಾರೇನೋ ಎನ್ನುವಂತೆ ರನ್‌ಗಳನ್ನು ಹರಿಸುತ್ತಿದ್ದ ದಿನಗಳೂ ನೆನಪಿನಲ್ಲಿವೆ. ಕ್ಲೈವ್ ಲಾಯ್ಡ್ ಹಾಗೂ ಗಾರ್ಡನ್ ಗ್ರೀನಿಜ್ ಕನ್ನಡದ ಚೌಕಟ್ಟಿನ ನಡುವಿನ ನೋಟದ ನಿಖರತೆಯನ್ನು ಹೇಗೆತಾನೆ ಮರೆಯಲಾದೀತು? ರೋಹನ್ ಕನ್ಹಾಯ್ ಚುರುತನಕ್ಕೆ ಇನ್ನಾರು ಸಾಟಿ? ಚಪ್ಪಟೆ ಮೂಗಿನ ಡೆಸ್ಮಂಡ್ ಹೇಯ್ನ್ಸ್ ಹೇಗೆ ಬೌಲರ್‌ಗಳ ಬೆವರಿಳಿಸುತ್ತಿದ್ದರೆಂದು ಚರ್ಚಿಸಿದವರ ಸಂಖ್ಯೆ ನೆನಪಿಸಿಕೊಳ್ಳಬೇಕು. ಆಂಡಿ ರಾಬರ್ಟ್ಸ್, ಮಾಲ್ಕಂ ಮಾರ್ಷಲ್, ಗೋಯಲ್ ಗಾರ್ನರ್, ಮೈಕಲ್ ಹೋಲ್ಡಿಂಗ್, ಕಾಲಿನ್ ಕ್ರಾಫ್ಟ್, ಕರ್ಟ್ನಿ ವಾಲ್ಷ್, ಕರ್ಟ್ಲಿ ಆಂಬ್ರೋಸ್ – ಇವರೆಲ್ಲರ ಬೌಲಿಂಗ್‌ಗೆ ನಡುಗಿದ ಬ್ಯಾಟ್ಸ್‌ಮನ್‌ಗಳನ್ನು ಪಟ್ಟಿ ಮಾಡಲಾರಂಭಿಸಿದರೆ, ವೆಸ್ಟ್ ಇಂಡೀಸ್ ತಂಡದ ಜಂಘಾಬಲ ಹೇಗಿತ್ತೆನ್ನುವುದು ಚೆನ್ನಾಗೇ ತಿಳಿಯುತ್ತದೆ.

ಹಾಗೆ ಇದ್ದ ತಂಡ ಈಗ ಹೀಗೆ ಸಪ್ಪೆಯಾದದ್ದು ಯಾಕೆ? ಭಾರತದ ಎದುರು ಎರಡು ಟೆಸ್ಟ್ ಪಂದ್ಯಗಳಲ್ಲಿ ಮೂರೇ ದಿನಗಳಲ್ಲಿ ಅದು ಸೋತಾಗ ಈ ಪ್ರಶ್ನೆ ಮತ್ತೆ ಮುಖ್ಯವಾಗಿ ಕಾಣುತ್ತಿದೆ.